

**ಮೂಕಸಾಕ್ಷಿ** ಹಸುರುಟ್ಟು ಸಂಭ್ರಮಿಸುತ್ತಿದ್ದ ಬೆಟ್ಟಗುಡ್ಡಗಳು ಕುಸಿದು ಬರಿದೆ ಬಯಲಾದಾಗ...

ಎಂಬುದನ್ನೂ ದಾಖಲಿಸಿದ್ದರು. ಅವರು ತಯಾರಿಸಿದ್ದು ಸಂಶೋಧನಾ ವರದಿ ಎನ್ನುವುದಕ್ಕಿಂತ, ಅದಾಗಲೇ ಸರ್ಕಾರಿ ಸಂಸ್ಥೆಗಳಲ್ಲಿ ಇದ್ದ ದತ್ತಾಂಶ ಆಧರಿಸಿ, ಸಲಹೆಗಳನ್ನು ಸರ್ಕಾರಕ್ಕೆ ನೀಡಿದ್ದರು. ರಸ್ತೆ, ಬಹುಮಹಡಿ ಕಟ್ಟಡ ಅಥವಾ ಕಾಂಕ್ರೀಟು ಬಳಸಿ ಮಾಡುವ ಯಾವುದೇ ಯೋಜನೆಗಳನ್ನು ಕೈಗೆತ್ತಿಕೊಳ್ಳುವುದು ಒಳಿತಲ್ಲ ಎಂಬ ಸಲಹೆ ಮುಖ್ಯವಾದುದು.

ಅನಿವಾರ್ಯವಾಗಿ ಯಾವುದೇ ಯೋಜನೆ ಕೈಗೆತ್ತಿಕೊಳ್ಳಬೇಕಾದರೆ ಬೆಟ್ಟದ ಮೇಲೆ ಇರುವ ಊರುಗಳಲ್ಲಿರುವ ಗ್ರಾಮಸಭೆಗಳಲ್ಲಿ ಆ ಬಗ್ಗೆ ಚರ್ಚೆ ನಡೆಸಿ ನಿರ್ಣಯ ತೆಗೆದುಕೊಳ್ಳಬೇಕು ಎನ್ನುವುದು ಗಾಡ್ಗೀಳ್ ವರದಿಯ ಪ್ರಧಾನ ಅಂಶವಾಗಿತ್ತು. ಯಾಕೆಂದರೆ, ಒಂದು ಊರಿನ ಪ್ರಾಕೃತಿಕ ಸ್ವರೂಪ ಹೇಗಿರುತ್ತದೆ ಎನ್ನುವುದು ಆ ಊರಿನ ಜನರಿಗೆ ತಿಳಿದಿರುತ್ತದೆ. ತಲೆಮಾರುಗಳಿಂದ ಅಲ್ಲಿ ನೆಲೆಸಿರುವ ಸಮುದಾಯಗಳು ಅಲ್ಲಿನ ಗಿಡಮರಗಳನ್ನು, ಮಣ್ಣಿನ ಗುಣ–ಲಕ್ಷಣ, ಝರಿ ನೀರು, ನದಿನೀರಿನ ಹರಿವಿನ ಲಕ್ಷಣಗಳನ್ನು ಅರಿತುಕೊಂಡಿರುತ್ತಾರೆ. ಆದ್ದರಿಂದ ಒಂದು ಹೊಸ ಯೋಜನೆಯನ್ನು ಕೈಗೆತ್ತಿಕೊಳ್ಳುವಾಗ ಅದಕ್ಕೆ ಸಂಬಂಧಿಸಿದ ಸಾಧಕ ಬಾಧಕಗಳ ಕುರಿತು ಸ್ಥಳೀಯರು ನೀಡುವ ಮಾಹಿತಿಯು ಸಮರ್ಪಕವಾಗಿರುತ್ತದೆ ಎನ್ನುವುದು ಗಾಡ್ಗೀಳ್ ಅವರ ನಿಲುವಾಗಿತ್ತು.

ಸಾವಧಾನದಿಂದ ಯೋಚಿಸಿದರೆ ಗಾಡ್ಗೀಳ್ ವರದಿಯಲ್ಲಿನ ಸಂಗತಿಗಳು ಸಾಮಾನ್ಯರಿಗೂ ಅರ್ಥವಾಗುವಂತಿವೆ. ಗಾಡ್ಗೀಳ್ ಅವರು ವರದಿ ಸಲ್ಲಿಸುವ ಮೊದಲೂ, ನಂತರವೂ ಅನೇಕರು ಈ ಎಲ್ಲ ವಿಚಾರಗಳನ್ನು ಪದೇಪದೇ ಪ್ರಸ್ತಾಪಿಸಿದ್ದಾರೆ. ಉದಾಹರಣೆಗೆ, ವಯನಾಡಿನಲ್ಲಿ ಪಣಿಯಾರ್, ಕುಡಿಚಿಯಾರ್ ಎಂಬ ಎರಡು ಪ್ರಧಾನ ಬುಡಕಟ್ಟು ಸಮುದಾಯಗಳು ವಾಸಿಸುತ್ತವೆ. ಇನ್ನೂ ಅನೇಕ ಸಣ್ಣಪುಟ್ಟ ಸಮುದಾಯಗಳು ಅಲ್ಲಿ ನೆಲೆಸಿವೆ. ಈ ಜನವಸತಿ ಇರುವೆಡೆಗಳಲ್ಲಿ ಪ್ರಾಕೃತಿಕ ವಿಕೋಪಗಳು ಹೆಚ್ಚೇನೂ ಸಂಭವಿಸಿಲ್ಲ. ಚಹಾ ತೋಟ, ರಬ್ಬರ್ ತೋಟಗಳನ್ನು ಮಾಡಿಕೊಂಡ, ಶಿಕ್ಷಣ, ಆಧುನಿಕತೆಯತ್ತ ಮುಖಮಾಡಿದ ಜನರ ಚಟುವಟಿಕೆಗಳು ಎಲ್ಲಿ ಹೆಚ್ಚಿವೆಯೋ ಅಲ್ಲಿಯೇ ಭೂ ಕುಸಿತವಾಗಿದೆ.

ಆಧುನಿಕ ಸವಲತ್ತುಗಳು ನಮಗೆ ಎಷ್ಟು ಬೇಕು ಎನ್ನುವುದಕ್ಕೆ ಮಿತಿಯೇನಾದರೂ ಇದೆಯೇ? ವಯನಾಡಿನ ತಾಮರಶೆರ್ರಿ ಘಾಟಿ ರಸ್ತೆಯಲ್ಲಿ ಸಂಚಾರ ದಟ್ಟಣೆಯಾಗುತ್ತಿದೆ ಎಂಬ ಕಾರಣಕ್ಕೆ ಬದಲಿ ರಸ್ತೆ ನಿರ್ಮಿಸುವ ಯೋಜನೆ ಸರ್ಕಾರದ ಮುಂದಿದೆ. ರಾಷ್ಟ್ರೀಯ ಹೆದ್ದಾರಿ 766ಕ್ಕೆ ಪರ್ಯಾಯವಾಗಿ ಕೋಳಿಕ್ಕೋಡು ಮತ್ತು ಕೊಳ್ಳೆಗಾಲವನ್ನು ಸಂಪರ್ಕಿಸುವ ಅವಳಿ ಸುರಂಗ ಮಾರ್ಗವೊಂದರ ನಿರ್ಮಾಣಕ್ಕೆ ಪ್ರಸ್ತಾವನೆ ಸಿದ್ಧಗೊಂಡಿದೆ. ಅಂದರೆ ಸುಮಾರು ಏಳೆಂಟು ಕಿಲೋಮೀಟರ್ ಉದ್ದದ ಸುರಂಗವು ಮೇಪ್ಪಾಡಿಯಿಂದ ಆರಂಭವಾಗಿ ಕೋಳಿಕ್ಕೋಡಿನ ಅನಕ್ಕಂಪೋಯಿಲ್‌ವರೆಗೆ ಸುರಂಗ ಕೊರೆಯುವುದು ಈ ಯೋಜನೆಯ ಪ್ರಧಾನ ಭಾಗ. ಕೆಲವು ವರ್ಷಗಳ ಹಿಂದೆ ಭೂಕುಸಿತದಿಂದ ನಲುಗಿದ ಭಾಗವಿದು. ಕಳೆದ ಜುಲೈ 31ರಂದು ಇಸ್ರೋ ಬಿಡುಗಡೆ ಮಾಡಿದ ಸ್ಯಾಟಲೈಟ್ ಚಿತ್ರವನ್ನು ಗಮನಿಸಿದರೆ, ವಯನಾಡ್‌ನಲ್ಲಿ ಕೆಲವು ವರ್ಷಗಳ ಹಿಂದೆ ನಡೆದ ಭೂಕುಸಿತದ ಗುರುತುಗಳು ಕಾಣಿಸುತ್ತವೆ. ರಾಷ್ಟ್ರೀಯ ದೂರ ಸಂವೇದಿ ಕೇಂದ್ರದ (ಎನ್‌ಆರ್‌ಎಸ್‌ಸಿ) ಮೂಲಕ ಬಿಡುಗಡೆಯಾದ ಈ ಚಿತ್ರ ಮಾಹಿತಿಯನ್ನು ಗಮನಿಸಿ ಬೆಟ್ಟದ ಇತಿಹಾಸವನ್ನೇ ಅಂದಾಜು ಮಾಡಬಹುದು. 2019ರಲ್ಲಿ ಪೂತುಮಲ ಭೂಕುಸಿತ ನಡೆದಿದ್ದರೆ, ಅದಕ್ಕೂ ಮುನ್ನ ಅಂದರೆ 2000ನೇ ಇಸವಿಯಲ್ಲಿ ಮತ್ತು 1984ರಲ್ಲಿಯೂ ಇಲ್ಲಿ ಭೂಕುಸಿತವಾಗಿದೆ. ಆದರೆ ನಾವು ಎಲ್ಲವನ್ನು ಆದಷ್ಟು ಬೇಗ ಮರೆತುಬಿಡಲು ಪ್ರಯತ್ನಿಸುತ್ತೇವೆ. ನೆನಪುಗಳಿಂದ ಪಾಠ ಕಲಿಯುವುದೆಂದರೆ ನಮಗೆ ಅಲರ್ಜಿಯೆನಿಸುತ್ತದೆ. ಭೂಕುಸಿತ ಆಗಬಹುದು ಎಂಬ ಎಚ್ಚರಿಕೆ ಇದ್ದಾಗ್ಯೂ ರಸ್ತೆ ಮಾತ್ರವಲ್ಲ, ಸುರಂಗವನ್ನೂ ನಿರ್ಮಿಸಲು ಹೊರಡುವುದೆಂದರೆ... ಇದಕ್ಕೇನು ಹೇಳುವುದು?

ದುರಂತಗಳು ಸಂಭವಿಸಿದಾಗ ಸರ್ಕಾರಗಳು ಇತ್ತೀಚೆಗೆ ‘ಎಲ್ಲದಕ್ಕೂ ಹವಾಮಾನ ಬದಲಾವಣೆಯೇ ಕಾರಣ’ ಎಂದು ಹೇಳಿ ಕೈ ತೊಳೆದುಕೊಂಡುಬಿಡುತ್ತವೆ. ಈ ಬಾರಿಯೂ, ಚೂರಲ್‌ಮಲ ಸುತ್ತಮುತ್ತ ಎರಡು ದಿನಗಳಲ್ಲಿ ಬಿದ್ದ ವಿಪರೀತ ಮಳೆಯಿಂದ ಈ ದುರಂತ ಸಂಭವಿಸಿದೆ ಎಂದು ವಿಶ್ಲೇಷಿಸಲಾಗುತ್ತಿದೆ. ಈ ವಿಶ್ಲೇಷಣೆಯು ಸುಳ್ಳೇನಲ್ಲ. ಎರಡೇ ದಿನಗಳಲ್ಲಿ 572 ಮಿ.ಮೀ. ಮಳೆಯಾಗಿರುವುದು ವರದಿಯಾಗಿದೆ. ಆದರೆ ಪ್ರಶ್ನೆ ಇರುವುದು, ಹವಾಮಾನ ಬದಲಾವಣೆ ದೆಸೆಯಿಂದ ದುರಂತಗಳು ಸಂಭವಿಸಬಹುದು ಎಂಬ ಪೂರ್ವಗ್ರಹಿಕೆಯೊಂದಿಗೆ ಇಂದು ನಾವು ಹೊಸ ಯೋಜನೆಗಳನ್ನು ಕೈಗೆತ್ತಿಕೊಳ್ಳುವ ವಿವೇಕವನ್ನು ಏಕೆ ತೋರುತ್ತಿಲ್ಲ ಎನ್ನುವುದಕ್ಕೆ ಸಂಬಂಧಿಸಿದ್ದು. ಸಂಭಾವ್ಯ ಅಪಾಯದ ಅರಿವಿದ್ದೂ ಸಾವಿನ ಬಾಯಲ್ಲಿ ವಸತಿ ಪ್ರದೇಶಗಳಿಗೆ ಅವಕಾಶ ಕೊಡುವುದು ಎಷ್ಟು ಸರಿ?

ಮುಂಡಕ್ಕೈ ಪ್ರದೇಶದಲ್ಲಿ ಭೂ ಕುಸಿತ ಆಗಾಗ ಸಂಭವಿಸುತ್ತಲೇ ಇರುತ್ತದೆ. ಈ ವಾಸ್ತವವನ್ನು ಜನರೂ ಗಮನಿಸಬೇಕಾಗಿದೆ. ತಾವು ವಾಸಿಸುತ್ತಿರುವ ಜಾಗ ಎಷ್ಟರಮಟ್ಟಿಗೆ ಸುರಕ್ಷಿತ ಎಂಬುದನ್ನು ಜನ ಅರಿತುಕೊಳ್ಳಬೇಕು. ತಜ್ಞರ ವರದಿಗಳನ್ನು, ಸಂಶೋಧಕರ ಮಾಹಿತಿಗಳನ್ನು ಗಮನಿಸಿ ಸರ್ಕಾರ ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕು. ವೇಗದ ಪ್ರಯಾಣ, ಆಧುನಿಕ ಸೌಕರ್ಯಗಳು, ಐಷಾರಾಮಿ ಪ್ರವಾಸಿ ತಾಣಗಳನ್ನು ನಿರ್ಮಿಸುವ ಮೂಲಕ ಆರ್ಥಿಕ ಸಂಪನ್ಮೂಲ ವೃದ್ಧಿಯಾಗಬಹುದು. ಆದರೆ ಇಂತಹ ದುರಂತಗಳನ್ನು ಗಮನಿಸಿದಾಗ ಅವೆಲ್ಲವೂ ಕ್ಷುಲ್ಲಕ.

ಪ್ರತಿಕ್ರಿಯಿಸಿ: **feedback@sudha.co.in**